**2 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 1580/2020**

| | | |
|---|---|---|
| ಹೆಸರು | ಶಿವರಾಜ | PW 4 |
| ತಂದೆಯ ಹೆಸರು | ಚಂದ್ರಶೇಖರಪ್ಪ | CW 2 |
| ವಯಸ್ಸು | 41 ವರ್ಷ | |
| ಉದ್ಯೋಗ | ವ್ಯವಸಾಯ | ದಿನಾಂಕಃ 18.04.2024 |
| ವಾಸ | ಬೂದಿಹಾಳು ಗ್ರಾಮ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 3 ರವರ ಪರಿಚಯ ಇದೆ. ಸಾಕ್ಷಿಗೆ ಎರಡು ದಾಖಲೆಯನ್ನು ತೋರಿಸಲಾಗಿ, ಸದರಿ ದಾಖಲೆ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಗಳನ್ನು ಈಗಾಗಲೇ ನಿಪಿ 2 ಮತ್ತು 3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ 2(ಬಿ) ಮತ್ತು ನಿಪಿ 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ದಿನಾಂಕ 20.09.2020 ರಂದು ಬೂದಿಹಾಳು ಗ್ರಾಮದ ಮಾರಿಕಾಂಬ ದೇವಸ್ಥಾನದಲ್ಲಿ ಕಳ್ಳತನವಾದ ವಿಚಾರವಾಗಿ ಪೊಲೀಸರು ಪಂಚನಾಮೆ ಮಾಡಲು ಬಂದಿದ್ದು, ಸದರಿ ಪಂಚನಾಮೆಯನ್ನು ಸಂಜೆ ಸುಮಾರು 5.00 ರಿಂದ 6.00 ಗಂಟೆವರೆಗೆ ಜರುಗಿಸಿರುತ್ತಾರೆ. ಸದರಿ ಕಾಲಕ್ಕೆ ಪೊಲೀಸರು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಸಾಕ್ಷಿಯ ಛಾಯಾಚಿತ್ರಗಳನ್ನು ಗುರುತಿಸಿದ್ದರಿಂದ ಅವುಗಳನ್ನು ಈಗಾಗಲೇ ನಿಪಿ 4 ಮತ್ತು 5 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ವೈ ಹೆಚ್ ಡಿ ವಕೀಲರಿಂದ ಃ**

ಪೊಲೀಸರು ಪಂಚನಾಮೆ ಮಾಡುವ ಕಾಲಕ್ಕೆ ನನಗೆ ನೋಟಿಸ ನೀಡಿರುತ್ತಾರೆ. ನನಗೆ ನೋಟಿಸ್ ಜಾರಿಮಾಡಿದ ಅಧಿಕಾರಿಯ ಹೆಸರು ಸತೀಶ್ ಎಂದು ಇರಬಹುದು. ಕಳ್ಳತನವಾದ ದೇವಸ್ಥಾನಕ್ಕೆ ಒಂದು ಕಮೀಟಿ ಇದೆ ಎಂದರೆ ಸರಿ. ಸದರಿ ಕಮೀಟಿಯಲ್ಲಿ ನಾನು ಸದಸ್ಯನಲ್ಲ ಎಂದರೆ ಸರಿ. ದೇವಸ್ಥಾನದಲ್ಲಿ ಸಿಸಿ ಟಿವಿ ಯನ್ನು ಅಳವಡಿಸಿಲ್ಲ ಎಂದರೆ ಸರಿ. ನಿಪಿ 2 ಪಂಚನಾಮೆಯನ್ನು ನನ್ನ ಸಮಕ್ಷಮ ಸತೀಶ್ ಕುಮಾರ ಎನ್ನುವ ಪೊಲೀಸ್ ಅಧಿಕಾರಿ ಬರೆದಿರುತ್ತಾರೆ. ನಿಪಿ 2 ಕ್ಕೆ ನಾನು ಖುದ್ದು ಮಾಹಿತಿ ನೀಡಿತ್ತೀಯಾ ಎಂದರೆ ಸರಿ. ಕಳ್ಳತನವಾದ ವಸ್ತುಗಳ ಬಗ್ಗೆ ನಾನು ಖುದ್ದು ಮಾಹಿತಿ ನೀಡಿಲ್ಲ. ದೂರುದಾರರು ಹೇಳಿರುತ್ತಾರೆ. ನಿಪಿ 2 ನ್ನು ಜರುಗಿಸುವ ಕಾಲಕ್ಕೆ 20-30 ಜನ ಇದ್ದರು ಅವರ ಹೆಸರು ನನಗೆ ಹೇಳಲು ಬರುವುದಿಲ್ಲ. ನಿಪಿ 4 ಮತ್ತು 5 ನ್ನು ತೆಗೆದ ಅಧಿಕಾರಿಯ ಹೆಸರು ನನಗೆ ಗೊತ್ತಿಲ್ಲ. ಪ್ರಕರಣದ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲದೇ ಇದ್ದರೂ ಸಹ ಚಾಸಾ 1 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ, ಹರಿಹರ.